**ಪದ್ಯಪಲ್ಲವ**



**ಎಚ್.ಎಸ್. ರಾಘವೇಂದ್ರ ರಾವ್**

# ತರ್ಕ ಮೀರಿದ ತಿಳಿವಳಿಕೆಯ ಹಾದಿ

ಪ್ರಕೃತಿ (ಭೂಮಿ) ಮತ್ತು ಮನುಷ್ಯರ ಸಂಬಂಧವು ಕನ್ನಡಕಾವ್ಯದ ಹುಡುಕಾಟಗಳಲ್ಲಿ ಒಂದು. 'ಚಿಗರಿಗಂಗಳ ಚೆಲುವೆ', 'ಮೊದಲಗಿತ್ತಿ', 'ಶರತ್ಕಾಲದ ಸೂರ್ಯೋದಯದಲಿ', 'ದ್ಯಾವಾಪೃಥ್ವಿ', 'ಭೂಮಿಗೀತ', 'ಇಡದಿರು ನನ್ನ ನಿನ್ನ ಸಿಂಹಾಸನದ ಮೇಲೆ', 'ಸಮಗಾರ ಭೀಮವ್ವ' ಮತ್ತು ಅದರಾಚೆಗೆ ಕೂಡ, ತಾತ್ವಿಕ/ಚಾರಿತ್ರಿಕ/ಸಾಮಾಜಿಕ ನೆಲೆಗಳಲ್ಲಿ ಇಂಥ ಅರಸುವಿಕೆಯ ಹರಹಿದೆ. ಪ್ರಕೃತಿಯಲ್ಲಿ ದೇವತ್ವವನ್ನು ಆರೋಪಿಸಿ ಗೌರವಿಸುವುದು, ಪೂಜಿಸುವುದು ಅದರ ಆಯಾಮಗಳಲ್ಲಿ ಒಂದು. 'ದೇವತಾ ಪೃಥಿವೀ' ಆ ಹಾದಿಯಲ್ಲೊಂದು ಮೈಲಿಗಲ್ಲು. ಇಲ್ಲಿನದು ತಾಯಿತತ್ವದ ತಿಳಿವಳಿಕೆಯನ್ನು ಆಧ್ಯಾತ್ಮಿಕ ಎತ್ತರಗಳಿಗೆ ಕರೆದೊಯ್ಯುವ ಪಯಣ. ಈ ಕವಿಯು ಬುದ್ಧಿ, ಭಾವ, ಭಕ್ತಿ, ಅನುಭಾವ ಮುಂತಾದ ಹಲವು ಹಾದಿಗಳಲ್ಲಿ, ಪಾಶ್ಚಾತ್ಯ ಮಿಸ್ಟಿಸಿಸಂ, ವಚನಗಳು, ಅರವಿಂದರ ತಿಳಿವಳಿಕೆ ಇತ್ಯಾದಿ ಉಪಕರಣಗಳ ಮೂಲಕ ನಡೆಸಿದ ಪಯಣದ ತಳಮಳ, ದುಃಖ, ಹರ್ಷ, ಉಲ್ಲಾಸಗಳನ್ನು ವಿಶಿಷ್ಟ 'ಕವಿತೆ'ಗಳ ಮೂಲಕ (ಮತ್ತು 'ಪೂರ್ವರಂಗ', 'ಕಾಳರಾತ್ರಿ', 'ಬೆಳಗು' ಮುಂತಾದ ಆತ್ಮಕಥೆಗಳಲ್ಲಿ) ತೋಡಿಕೊಂಡವರು. 'ದೇವತಾ ಪೃಥಿವೀ' ಈ ಕವಿಯ 'ಜಾನಪದ'ವೆನಿಸುವಂತಹ ರಚನೆ. ಬಗೆಯ ಕವಿತೆಗಳ ಆರ್ದ್ರತೆ, ಭಾವತೀವ್ರತೆ ಮತ್ತು ಕಾವ್ಯಗುಣಗಳು ನಾಸ್ತಿಕರನ್ನೂ ಬರಸೆಳೆಯುತ್ತವೆ.

'ಮಧುರಗೀತ', 'ನನ್ನ ನಲ್ಲ'ಗಳಂತೆ ಇದೂ ಕವಿಯ 'ಆತ್ಮಪಯಣ'ದಲ್ಲೊಂದು ತಂಗು-ತಲ್ಲಣ-ತಾಣ. ಇಲ್ಲಿನದು 'ಪೂರ್ವರಂಗ' ಮತ್ತು 'ಕಾಳರಾತ್ರಿ'ಗಳ ನಡುವಿನ ಹಂತ. ಕಳೆದ ಕಾಲದ ಮುಗ್ಧ, ತೃಪ್ತ ಸ್ಥಿತಿ ಮತ್ತು ಕವಿತೆ ಬರೆಯುತ್ತಿರುವ ಕಾಲದ, 'ಬೇರೆ ಯಾವುದಕ್ಕೋ ಹಂಬಲಿಸುತ್ತಿರುವ ಅತೃಪ್ತ' ಸ್ಥಿತಿಗಳ ಹೋಲಿಕೆ ಇಲ್ಲಿದೆ. ಪ್ರಕೃತಿಯು 'ಮೊಲೆಹಾಲ'ನ್ನು ಸಹಜವಾಗಿಯೇ ಕೊಟ್ಟರೆ, ಎದೆಹಾಲನ್ನು ಪಡೆಯಲು ಆರ್ತವಾಗಿ, ಆರ್ದ್ರವಾಗಿ ಹಂಬಲಿಸಿದವರಿಗೆ ಮಾತ್ರ ಸಾಧ್ಯ.'ಮೊಲೆಹಾಲು-ಮನದ್ವಾಲು', 'ಕತ್ತಲೆಯ ಸೋಂಕು- ಹೂಬಿಸಿಲ ಮಂಕು', 'ಕಾಣದ ಕುರುಡು'-'ಕಾಣುವ ಈ ಕುರುಡು' ಮುಂತಾದ ಜೋಡಿಕನ್ನಡಿ ರೂಪಕಗಳು ಈ ಬೇರೆ ಬೇರೆ ಮನಃಸ್ಥಿತಿಗಳಿಗೆ ಹಿಡಿದವು.